# <u>ಉದ್ಯಮ ನೋಂದಣಿ ಮಾಡಿಸುವುದರ ಪ್ರಯೋಜನಗಳು</u>

ಭಾರತ ಸರ್ಕಾರದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯವು, ಭಾರತದ ರಾಜಪತ್ರ, ವಿಶೇಷ ಸಂಚಿಕೆ, ಭಾಗ-II, ಪ್ರಕರಣ-3, ಉಪ-ಪ್ರಕರಣ (ii), ದಿನಾಂಕ 26ನೇ ಜೂನ್ 2020 ರ ಮೂಲಕ ಉದ್ಯಮಗಳನ್ನು 1ನೇ ಜುಲೈ, 2020 ರಿಂದ ಜಾರಿಗೆ ಬರುವಂತೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳೆಂದು ವರ್ಗೀಕರಿಸುವ ಮಾನದಂಡವನ್ನಾಗಿ ಹೂಡಿಕೆ ಮತ್ತು ಆದಾಯ ಎರಡನ್ನೂ ಒಳಗೊಂಡ ಒಂದು ಸಂಯೋಜಿತ ಮಾನದಂಡವನ್ನು ಅಧಿಸೂಚಿಸಿದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಹೊಸ ಪರಿಭಾಷೆಗಳ ಅನುಸಾರವಾಗಿ ಹಾಗೂ ವ್ಯವಹರಣೆಗಳನ್ನು ಸುಗಮಗೊಳಿಸುವ ಕ್ರಮವಾಗಿ ಈ ವ್ಯವಸ್ಥೆಯು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಖಾಯಂ ನೋಂದಣಿ ಎಂದರೆ 'ಉದ್ಯಮ ನೋಂದಣಿ' ಗೆ ಅವಕಾಶ ಕಲ್ಪಿಸುತ್ತದೆ.

**<u>ಪ್ರಮುಖ ಗುಣಲಕ್ಷಣಗಳು</u>:**

- ಉದ್ಯಮಗಳಿಗಾಗಿ ಯಾರೇ ವ್ಯಕ್ತಿಯು ಉದ್ಯಮ ನೋಂದಣಿಯನ್ನು ಪಡೆದುಕೊಳ್ಳಬಹುದು. ಇದನ್ನು ಪೋರ್ಟಲ್ ಎಂದರೆ http://udyamregistration.gov.in/Government-India/Misistry-MSME-registration.htm ಮೂಲಕ ನೋಂದಾಯಿಸಿಕೊಳ್ಳಬಹುದು.
- ಉದ್ಯಮ ನೋಂದಣಿಯ ಪ್ರಕ್ರಿಯೆಯು ಸಂಪೂರ್ಣವಾಗಿ ಡಿಜಿಟಲೀಕೃತ ಮತ್ತು ಕಾಗದರಹಿತವಾಗಿರುತ್ತದೆ. ಯಾವುದೇ ದಸ್ತಾವೇಜನ್ನು ಅಪ್ಲೋಡ್ ಮಾಡಬೇಕಾದ ಅಗತ್ಯವಿರುವುದಿಲ್ಲ.
- ನೋಂದಣಿ ಪ್ರಕ್ರಿಯೆಯು ಸಂಪೂರ್ಣವಾಗಿ ಉಚಿತವಾಗಿರುತ್ತದೆ. ಯಾರೊಬ್ಬರಿಗೂ ವೆಚ್ಚಗಳು ಅಥವಾ ಶುಲ್ಕಗಳನ್ನು ಭರಿಸಬೇಕಾಗಿಲ್ಲ.

- ನೋಂದಣಿ ಪ್ರಕ್ರಿಯೆಯು ಪೂರ್ಣಗೊಳ್ಳುತ್ತಿದ್ದಂತೆ ‘ಉದ್ಯಮ ನೋಂದಣಿ ಪ್ರಮಾಣಪತ್ರ’ ವೆಂಬ ಹೆಸರಿನ ಇ-ಪ್ರಮಾಣಪತ್ರವನ್ನು ಆನ್‌ಲೈನ್ ಮೂಲಕ ವಿತರಣೆ ಮಾಡತಕ್ಕದ್ದು.
- ಈ ಪ್ರಮಾಣಪತ್ರವು ಸಮರ್ಥವಾದ ಕ್ಯೂಆರ್ ಕೋಡ್ ಅನ್ನು ಹೊಂದಿದ್ದು, ಅದರಿಂದ ನಮ್ಮ ಪೋರ್ಟಲ್ ನಲ್ಲಿ ವೆಬ್ ಪುಟ ಮತ್ತು ಉದ್ಯಮದ ಬಗ್ಗೆ ವಿವರಗಳನ್ನು ಪಡೆಯಬಹುದು.
- ಉದ್ಯಮ ನೋಂದಣಿ ಅಥವಾ ಅಪ್‌ಡೇಷನ್ ಪ್ರಕ್ರಿಯೆಯಲ್ಲಿ ಕಂಡುಬರುವ ಸ್ವಯಂ-ಘೋಷಿತ ಸತ್ಯಾಂಶಗಳು ಮತ್ತು ಅಂಕಿಅಂಶಗಳನ್ನು ಯಾರಾದರೂ ಉದ್ದೇಶಪೂರ್ವಕವಾಗಿ ತಪ್ಪಾಗಿ ನಿರೂಪಿಸಿದರೆ ಅಥವಾ ಮರೆಮಾಚಲು ಪ್ರಯತ್ನಿಸಿದರೆ ಅಧಿನಿಯಮದ ಪ್ರಕರಣ 27ರ ಅಡಿಯಲ್ಲಿ ನಿರ್ದಿಷ್ಟಪಡಿಸುವಂಥ ದಂಡನೆಗೆ ಗುರಿಯಾಗತಕ್ಕದ್ದು.
- ಆನ್‌ಲೈನ್ ವ್ಯವಸ್ಥೆಯು ಸಂಪೂರ್ಣವಾಗಿ ಆದಾಯ ತೆರಿಗೆ ಮತ್ತು ಸರಕುಗಳು ಹಾಗೂ ಸೇವೆಗಳ ತೆರಿಗೆಯ ಗುರುತಿನ ಸಂಖ್ಯೆ (ಜಿಎಸ್‌ಟಿಐಎನ್) ವ್ಯವಸ್ಥೆಗಳೊಂದಿಗೆ ಸಂಯೋಜಿಸಲಾಗಿದ್ದು, ಉದ್ಯಮಗಳ ಹೂಡಿಕೆ ಮತ್ತು ವಹಿವಾಟಿನ ಆದಾಯವನ್ನು ಸರ್ಕಾರದ ದತ್ತಾಂಶ ಮೂಲದಿಂದ ಸ್ವಯಂಚಾಲಿತವಾಗಿ ತೆಗೆದುಕೊಳ್ಳಲಾಗುತ್ತದೆ. ರಫ್ತುಗಳನ್ನು ವಹಿವಾಟಿನ ಲೆಕ್ಕಾಚಾರದ ಭಾಗವಾಗಿ ತೆಗೆದುಕೊಳ್ಳಲಾಗುವುದಿಲ್ಲ.
- ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯದ ಅಡಿಯಲ್ಲಿನ ಯಾವುದೇ ಪ್ರಾಧಿಕಾರದಿಂದ ನೀಡಲಾದ ಇಎಮ್-II ಅಥವಾ ಯುಎಮ್ ನೋಂದಣಿ ಅಥವಾ ಯಾವುದೇ ಇತರ

ನೋಂದಣಿಯನ್ನು ಹೊಂದಿರುವ ಯಾರೇ ವ್ಯಕ್ತಿಗಳು 31.03.2021 ರ ಮುಂಚಿತವಾಗಿ ಸ್ವತಃ ಮರುನೋಂದಣಿ ಮಾಡಿಕೊಳ್ಳತಕ್ಕದ್ದು.

- ಯಾವುದೇ ಉದ್ಯಮವು ಒಂದಕ್ಕಿಂತ ಹೆಚ್ಚಿನ ಉದ್ಯಮ ನೋಂದಣಿವನ್ನು ಮಾಡಿಕೊಳ್ಳತಕ್ಕದ್ದಲ್ಲ. ಆದಾಗ್ಯೂ, ಉತ್ಪಾದನೆ ಅಥವಾ ಸೇವೆ ಅಥವಾ ಎರಡನ್ನೂ ಒಳಗೊಂಡಂತಹ ಯಾವುದೇ ಸಂಖ್ಯೆಯ ಚಟುವಟಿಕೆಗಳನ್ನು ಒಂದು ನೋಂದಣಿಯಲ್ಲಿ ನಿರ್ದಿಷ್ಟಪಡಿಸಬಹುದು ಅಥವಾ ಸೇರಿಸಬಹುದು.

**ನೋಂದಣಿಯ ಅಗತ್ಯತೆ:**

- ನೋಂದಣಿಗೆ ಕೇವಲ ಆಧಾರ್ ಸಂಖ್ಯೆ ಮಾತ್ರವೇ ಸಾಕಾಗುತ್ತದೆ.
- 01.04.2021 ರಿಂದ ಪ್ಯಾನ್ ಮತ್ತು ಜಿಎಸ್‌ಟಿ ಸಂಖ್ಯೆ ಹೊಂದಿರುವುದು ಕಡ್ಡಾಯ.

**ಈ ನೋಂದಣಿಯ ಪ್ರಯೋಜನಗಳು:**

- ಇದು ಉದ್ಯಮಕ್ಕಾಗಿನ ಖಾಯಂ ನೋಂದಣಿ ಮತ್ತು ಮೂಲ ಗುರುತಿನ ಸಂಖ್ಯೆಯಾಗಿದೆ.
- ಎಂಎಸ್‌ಎಮ್‌ಇ ಯ ನೋಂದಣಿಯು ಕಾಗದರಹಿತ ಮತ್ತು ಸ್ವಯಂ-ಘೋಷಣೆಯ ಮೇಲೆ ಆಧಾರಿತವಾಗಿದೆ.
- ನೋಂದಣಿಯನ್ನು ನವೀಕರಿಸುವ ಅಗತ್ಯವಿರುವುದಿಲ್ಲ.
- ಉತ್ಪಾದನೆ ಅಥವಾ ಸೇವೆಗಳನ್ನು ಅಥವಾ ಅವೆರಡನ್ನೂ ಸಹ ಒಳಗೊಂಡಂತೆ ಯಾವುದೇ ಸಂಖ್ಯೆಯ ಚಟುವಟಿಕೆಗಳನ್ನು ಒಂದು ನೋಂದಣಿಯಲ್ಲಿ ನಿರ್ದಿಷ್ಟಪಡಿಸಬಹುದು ಅಥವಾ ಸೇರಿಸಬಹುದು.
- ಉದ್ಯಮ ನೋಂದಣಿಯೊಂದಿಗೆ, ಉದ್ಯಮಗಳು ತಾವು ಜಿಇಎಮ್ (ಜಿ ನಿಂದ ಬಿ ವರೆಗಿನ ಪೋರ್ಟಲ್ ಆದ ಸರ್ಕಾರಿ ಇ-ಮಾರುಕಟ್ಟೆ ಸ್ಥಳ)

ಮತ್ತು ಸಮಾಧಾನ್ (SAMADHAAN) ಪೋರ್ಟಲ್ (ಯಾವುದೇ ಹಣ ಸಂದಾಯದ ವಿಳಂಬಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವ ಪೋರ್ಟಲ್) ಮತ್ತು ಏಕಕಾಲದಲ್ಲಿಯೇ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಸ್ವತಃ ಮೂರು ಲಭ್ಯವಿರುವ ಫ್ಲಾಟ್‌ಫಾರ್ಮ್‌ಗಳ ಮೂಲಕ ಎಂದರೆ,- 1. www.invoicemart.com, 2. www.mlxchange.com,

3. www.rxil.in ಟಿಆರ್‌ಇಡಿಎಸ್ ಫ್ಲಾಟ್‌ಫಾರ್ಮ್‌ನಲ್ಲಿ ಕೂಡ ಸೇರಬಹುದು (ಸ್ವೀಕೃತಿಗಳ ಇನ್‌ವಾಯಿಸ್‌ಗಳು ಈ ಫ್ಲಾಟ್‌ಫಾರ್ಮ್‌ನಲ್ಲಿ ವಹಿವಾಟಾಗುತ್ತದೆ).

- ಉದ್ಯಮ ನೋಂದಣಿಯು ಎಂಎಸ್‌ಎಮ್‌ಇ ಗಳಿಗೆ ಎಂಎಸ್‌ಎಮ್‌ಇ ಮಂತ್ರಾಲಯದ ಸಾಲ ಖಾತರಿ ಯೋಜನೆ, ಸಾರ್ವಜನಿಕ ಖರೀದಿ ನೀತಿ, ಸರ್ಕಾರದ ಟೆಂಡರ್‌ಗಳಲ್ಲಿ ಹೆಚ್ಚುವರಿ ಗಳಿಕೆ (ಎಡ್ಜ್) ಮತ್ತು ಪಾವತಿಯಲ್ಲಿನ ವಿಳಂಬ ಇತ್ಯಾದಿಗಳ ವಿರುದ್ಧ ರಕ್ಷಣೆಯಂತಹ ಯೋಜನಾ ಪ್ರಯೋಜನಗಳನ್ನು ಪಡೆಯಲು ಸಹ ನೆರವಾಗಲಿದೆ.
- ಬ್ಯಾಂಕುಗಳಿಂದ ಆದ್ಯತಾ ವಲಯದ ಸಾಲ ಪಡೆಯುವಿಕೆಗೆ ಅರ್ಹತೆ ಪ್ರಾಪ್ತವಾಗುತ್ತದೆ.

## <u>ಆದ್ಯತಾ ವಲಯದ ಸಾಲ ಪಡೆಯುವಿಕೆ:</u>

ಆದ್ಯತಾ ವಲಯದ ಸಾಲ ಪಡೆಯುವಿಕೆಯ ಮಾರ್ಗಸೂಚಿಗಳನ್ನು ಭಾರತದ ರಿಸರ್ವ್ ಬ್ಯಾಂಕು ಹೊರಡಿಸಿದೆ. ಭಾರತದ ರಿಸರ್ವ್ ಬ್ಯಾಂಕು ಸುತ್ತೋಲೆ ಸಂಖ್ಯೆ. ಆರ್‌ಬಿಐ/ಎಫ್‌ಐಡಿಡಿ/2020-21/72 ಪ್ರಧಾನ ನಿರ್ದೇಶನಗಳು ಎಫ್‌ಐಡಿಡಿ.ಸಿಓ.ಪ್ಲಾನ್.ಬಿಸಿ.5/04.09.01/2020-21 ದಿನಾಂಕ ಸೆಪ್ಟೆಂಬರ್ 04, 2020 ರ ಮೂಲಕ ಆದ್ಯತಾ ವಲಯದ ಸಾಲ ಪಡೆಯುವಿಕೆಯ

ಮಾರ್ಗಸೂಚಿಯನ್ನು ಹೊರಡಿಸಿದೆ. ಅದರಂತೆ, ಆದ್ಯತಾ ವಲಯದ ವರ್ಗೀಕರಣವು ಈ ಮುಂದಿನಂತಿವೆ (i) ಕೃಷಿ, (ii) ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು, (iii) ರಫ್ತು ಸಾಲ, (iv) ಶಿಕ್ಷಣ, (v) ವಸತಿ, (vi) ಸಾಮಾಜಿಕ ಮೂಲ ಸೌಕರ್ಯ, (vii) ನವೀಕರಿಸಬಹುದಾದ ಇಂಧನ, (viii) ಇತರೆ. ಆದ್ದರಿಂದ, ಎಂಎಸ್ಎಮ್ಇ ವಲಯವು ಆದ್ಯತಾ ವಲಯದ ಸಾಲ ಪಡೆಯುವಿಕೆಯ ವ್ಯಾಪ್ತಿಗೆ ಬರುತ್ತದೆ. ಆರ್‌ಬಿಐ ಪ್ರಕಾರ, ಕ್ರಮವಾಗಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ವಲಯದ ಮೇಲಿನ ನಗದು ಹರಿವು ಕುರಿತಂತೆ ಎಂಎಸ್ಎಮ್ಇಗಳ ಕುರಿತಾದ ಪರಿಭಾಷೆಯು, ಸುತ್ತೋಲೆ ಸಂಖ್ಯೆ: ಆರ್‌ಬಿಐ/2020-2021/10 ಎಫ್ಐಡಿಡಿ. ಎಂಎಸ್ಎಮ್ಇ ಮತ್ತು ಎನ್ಎಫ್ಎಸ್.ಬಿಸಿ. ಸಂಖ್ಯೆ 3/06.02.31/2020-21 ರ ಸಹವಾಚನದೊಂದಿಗೆ ಹಾಗೂ ಎಫ್ಐಡಿಡಿ.ಎಂಎಸ್ಎಮ್ಇ ಮತ್ತು ಎನ್ಎಫ್ಎಸ್.ಬಿಸಿ. ಸಂಖ್ಯೆ 4/06.02.31/2020-21 ದಿನಾಂಕ ಜುಲೈ 2, 2020, ಆಗಸ್ಟ 21, 2020 ರ ಸಹವಾಚನದೊಂದಿಗೆ ಭಾರತ ಸರ್ಕಾರದ ರಾಜಪತ್ರ ಅಧಿಸೂಚನೆ ಎಸ್.ಓ.2119 (ಇ) ದಿನಾಂಕ ಜೂನ್ 26, 2020 ರ ಅನುಸಾರ ಇರುತ್ತದೆ ಮತ್ತು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತದೆ. ಮುಂದುವರೆದು, ಅಂತಹ ಎಂಎಸ್ಎಮ್ಇಗಳು ಯಾವುದೇ ರೀತಿಯಲ್ಲಿ ಕೈಗಾರಿಕೆಗಳ (ಅಭಿವೃದ್ಧಿ ಮತ್ತು ವಿನಿಯಮ) ಅಧಿನಿಯಮ, 1951 ರ ಮೊದಲ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕೈಗಾರಿಕೆಗೆ ಸಂಬಂಧಿಸಿದ ಉತ್ಪಾದನೆ ಅಥವಾ ಉತ್ಪನ್ನ ಕಾರ್ಯದಲ್ಲಿ ತೊಡಗಿರತಕ್ಕದ್ದು ಅಥವಾ ಯಾವುದೇ ಸೇವೆ ಅಥವಾ ಸೇವೆಗಳನ್ನು ಒದಗಿಸುವಲ್ಲಿ ಅಥವಾ ನೀಡುವಲ್ಲಿ ತೊಡಗಿರತಕ್ಕದ್ದು.

ಆರ್‌ಬಿಐ ಮಾರ್ಗಸೂಚಿಗಳನ್ನು ಪರಿಪಾಲಿಸಿದ ಎಂಎಸ್‌ಎಮ್‌ಇಗಳ ಎಲ್ಲಾ ಬ್ಯಾಂಕು ಸಾಲಗಳು ಆದ್ಯತಾ ವಲಯದ ಸಾಲದ ಅಡಿಯಲ್ಲಿ ವರ್ಗೀಕರಣಕ್ಕೆ ಅರ್ಹವಾಗುತ್ತವೆ.